- -

ಅಸಲು ದಾವೆ ಸಂಖ್ಯೆ -299/2022
ಪಿ.ಡಬ್ಲ್ಯು - 01
ದಿನಾಂಕಃ 05-11-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಸಿ ಎಸ್ ಎಮ್ ವಕೀಲರಿಂದ**

ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಿದ್ದೀರಿ ಎಂದರೆ ಆಸ್ತಿ ಸಲುವಾಗಿ ಎಂದು ನುಡಿಯುತ್ತಾರೆ. ದಾವಾ ಅಸ್ತಿ ಆಸ್ತಿ ನಂಬರ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ಮತ್ತು ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಈಗ ಯಾರ ಹೆಸರಿನಲ್ಲಿದೆ ಎಂದರೆ ಸುಳ್ಳು ದಾಖಲೆ ಸೃಷ್ಠಿಸಿಕೊಂಡು ಪಾರವ್ವ (1 ನೇ ಪ್ರತಿವಾದಿ) ಹೆಸರನಲ್ಲಿದೆ. ನೀವು ಹೇಳಿದ ಹಾಗೆ ದಾವಾ ಆಸ್ತಿ ಪಾರವ್ವ ರವರ ಹೆಸರಿನಲ್ಲಿ ಇಲ್ಲ ಎಂದರೆ ನನ್ನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ನೀವು ಫಕ್ಕೀರಪ್ಪ ಶಿರೂರ ರವರ ಹೆಂಡತಿ ಎಂದು ತೋರಿಸಲು ಯಾವ ದಾಖಲೆಗಳನ್ನು ಸಲ್ಲಿಸಿದ್ದೀರಿ ಎಂದರೆ ಆಧಾರ ಕಾರ್ಡ, ಪಡಿತರ ಚೀಟಿ ಮತ್ತು ಮರಣ ಉತಾರ ಎಂದು ನುಡಿಯುತ್ತಾರೆ. ಪಡಿತರ ಚೀಟಿಯನ್ನು ನೀವು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ನಿಪಿ- 11 ನ್ನು ಸೃಷ್ಠಿಮಾಡಿಕೊಂಡು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಫಕ್ಕೀರಪ್ಪ ಶಿರೂರ ರವರ ಹೆಂಡತಿ ಎಂದು ತೋರಿಸಲು ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸುತ್ತೀರಾ ಎಂದರೆ ನಾನು 12 ವರ್ಷದವಳಾಗಿದ್ದಾಗಲೇ ನನ್ನ ಮದುವೆ ಮಾಡಿರುತ್ತಾರೆ. ಹಾಗಾಗಿ ಪತ್ರಿಕೆ ಇರುವುದಿಲ್ಲ. ನೀವು ಫಕ್ಕೀರಪ್ಪ ಶಿರೂರ ರವರನ್ನು ಮದುವೆ ಯಾಗದೆ ಇರುವುದಕ್ಕೆ ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿಲ್ಲ ಎಂದರೆ ನಮಗೆ ಒಬ್ಬಳು ಮಗಳು ಇದ್ದಾಳೆ ನುಡಿಯುತ್ತಾರೆ. ನಿಮ್ಮ ಮದುವೆ ಭಾವ ಚಿತ್ರ ಹಾಜರುಪಡಿಸುತ್ತೀರಾ ಎಂದರೆ ಆ ವೇಳೆಯಲ್ಲಿ ಭಾವ ಚಿತ್ರ ತೆಗೆದಿರುವುದಿಲ್ಲ. ನಿಮ್ಮ ಮದುವೆ ಯಾವಾಗ ಮತ್ತು ಎಲ್ಲಿ ಆಯಿತು ಎಂದರೆ ಯಲವಿಗಿ ಗ್ರಾಮದಲ್ಲಿ ಆಗಿರುತ್ತದೆ. ದಿನಾಂಕ ನೆನೆಪಿಲ್ಲ.

ಯಲವಿಗಿ ಗ್ರಾಮದಲ್ಲಿ ಫಕ್ಕೀರಪ್ಪ ರವರ ಜೊತೆ ಎಷ್ಟು ಬಾಳ್ವೆ ಮಾಡಿದ್ದೀರಿ ಎಂದರೆ ಸುಮಾರು 30 ವರ್ಷ ಮಾಡಿದ್ದೇವೆ ಅದರಲ್ಲಿ 3 ಮಕ್ಕಳಾಗಿದ್ದು ಇಬ್ಬರು ತೀರಿಕೊಂಡಿರುತ್ತಾರೆ. ಹಾಗಾದರೆ ಯಾವ ವರ್ಷದಿಂದ ಬಾಳ್ವೆ ಮಾಡಿದ್ದೀರಿ ಎಂದು ಹೇಳಲು ಆಗುವುದಿಲ್ಲ ಎಂದರೆ

ನನಗೆ ಹೇಳಲು ಬರುವುದಿಲ್ಲ. ನೀವು ಫಕ್ಕೀರಪ್ಪನ ಜೊತೆ ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನಮ್ಮ ಮಾವನವರು ನಮ್ಮ ಮದುವೆ ಮಾಡಿರುತ್ತಾರೆ.

ಪಾರವ್ವಳೇ ಫಕ್ಕಿರಪ್ಪನ ಹೆಂಡತಿ ಎಂದರೆ ಸರಿಯಲ್ಲ. ಮುಂದುವರೆದು ನಾನು ಹೆಂಡತಿ ಇರುತ್ತೇವೆ. ಫಕ್ಕೀರಪ್ಪ ಯಾವಾಗ ತೀರಕೊಂಡ ಎಂದರೆ ಸುಮಾರು 25 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಿಮಗೆ ತಾರೀಖು, ತಿಂಗಳು, ಇಸವಿ ಗೊತ್ತಿಲ್ಲ ಎಂದರೆ ಗೊತ್ತಿಲ್ಲ. ಫಕ್ಕೀರಪ್ಪ ನವರಿಗೆ ಎಷ್ಟು ಆಸ್ತಿ ಇದ್ದವು ಎಂದರೆ ಒಂದೇ ಆಸ್ತಿ ಇತ್ತು. ನೀವು ದಾವೆಯಲ್ಲಿ ತೋರಿಸಿದಂತೆ ಚಾಕಲಬ್ಬಿ ಗ್ರಾಮದಲ್ಲಿ ಇದ್ದೀರಿ ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇರುವುದಿಲ್ಲ. ನಾನು ನನ್ನ ಮಗಳ ಮನೆಯಲ್ಲಿ ಇದ್ದೇನೆ. ದಾವೆಯನ್ನು ಬರೆಯಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ದಾವೆಯನ್ನು ಎಷ್ಟು ಆಸ್ತಿಯ ಮೇಲೆ ಹೂಡಿದ್ದೀರಿ ಎಂದರೆ ಒಂದು ಆಸ್ತಿಯ ಮೇಲೆ ಹೂಡಿದ್ದೇನೆ. ಫಕ್ಕೀರಪ್ಪನ ಆಸ್ತಿಯಲ್ಲಿ ನಿಮಗೆ ಎಷ್ಟು ಆಸ್ತಿ ಬಂತು ಮತ್ತು ಪಾರವ್ವ ರವರಿಗೆ ಎಷ್ಟು ಆಸ್ತಿ ಬಂತು ಎಂದರೆ ನನಗೆ ಯಾವುದೇ ಆಸ್ತಿ ಬಂದಿರುವುದಿಲ್ಲ. ಯಲವಿಗಿ ಗ್ರಾಮದ ಆಸ್ತಿ ನಂ. 414/1 ನಿಮ್ಮ ಹೆಸರಿಗೆ ಬಂದಿರುತ್ತದೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಪಾರವ್ವರವರಿಗೆ ಮಾಲತೇಶ ಎಂಬ ಮಗ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಹಿರಿಯರ ಸಮಕ್ಷಮ ಮಾತುಕತೆಯಾಗಿ ಯಲವಿಗಿ ಗ್ರಾಮದ ಆಸ್ತಿ ನಂ. 414/1 ನಿಮಗೆ ನೀಡಿರುತ್ತಾರೆ ಎಂದರೆ ಯಾವುದೇ ಆಸ್ತಿಯನ್ನು ನನಗೆ ನೀಡಿರುವುದಿಲ್ಲ. ಆ ಪ್ರಕಾರ ದಾವಾ ಆಸ್ತಿ ಪಾರವ್ವ ರವರ ಹೆಸರಿಗೆ ಹೋಗಿರುತ್ತದೆ ಎಂದರೆ ಅವರು ಸುಳ್ಳು ದಾಖಲೆಗಳನ್ನು ಸೃಷ್ಠಿಸಿಕೊಂಡು ತಮ್ಮ ಹೆಸರು ದಾಖಲಿಸಿರುತ್ತಾರೆ. ನಿಮ್ಮ ಮತ್ತು ಪಾರವ್ವ ನಡುವೆ ಆದ ಮಾತುಕತೆಯಂತೆ ದಾವಾ ಆಸ್ತಿಯು ಪಾರವ್ವ ರವರ ಹೆಸರಿನಲ್ಲಿ 1992 ರಿಂದ 2022 ರ ವರೆಗೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿ ಅವರ ಕಬ್ಜಾ ವಹಿವಾಟಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

ನೀವು ಚಾಕಲಬ್ಬಿ ಗ್ರಾಮದಲ್ಲಿ ಎಷ್ಟು ವರ್ಷದಿಂದ ಇದ್ದೀರಿ ಎಂದರೆ ಸುಮಾರು 25 ವರ್ಷದಿಂದ ಅಲ್ಲಿ ಇದ್ದೇನೆ ಆದರೆ ಇಲ್ಲಿಗೆ ಬಂದು ಹೋಗುವುದನ್ನು ಮಾಡುತ್ತಿದ್ದೇನೆ. ದಾವಾ ಆಸ್ತಿಯಲ್ಲಿ ನೀವು ಎಂದಿಗೂ ಸಹ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

OS No. 299/2022 PW.1

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.